
# ಆಧ್ಯಾತ್ಮಿಕ ಸಾಧನೆ



ಅತಿಯಾಗಿ ಬಾಹ್ಯಾಚಾರದಲ್ಲಿ ತೊಡಗಬೇಡ. ಒಮ್ಮೆ ಒಬ್ಬ ಸಾಧುವಿಗೆ ತಡೆಯಲಾರದ ಬಾಯಾರಿಕೆಯಾಯಿತು. ಚಕ್ಕಳದಲ್ಲಿ ನೀರು ಹೊತ್ತುಕೊಂಡು ಹೋಗುತ್ತಿದ್ದ ಒಬ್ಬ ವ್ಯಕ್ತಿ ನೀರು ಕೊಡಲು ಮುಂದೆ ಬಂದ. ಸಾಧು ಆತನನ್ನು ಕೇಳಿದ: 'ಏನು, ನಿನ್ನ ಚೀಲವನ್ನು ಚೆನ್ನಾಗಿ ತೊಳೆದಿದ್ದೀಯಾ?' ಆತ ಹೇಳಿದ: 'ಸ್ವಾಮಿ, ನನ್ನ ಚೀಲ ಸಂಪೂರ್ಣವಾಗಿ ಪರಿಶುದ್ಧವಾಗಿದೆ. ಆದರೆ ನಿಮ್ಮ ಚೀಲದೊಳಗೆ ಮಲ, ಮೂತ್ರ, ಇನ್ನೂ ಏನೇನೋ ಕಶ್ಮಲ ತುಂಬಿವೆ. ಆದ್ದರಿಂದ ನಾನು ಹೇಳುತ್ತೇನೆ. ನೀವು ನಿಸ್ಸಂಕೋಚವಾಗಿ ನನ್ನ ಚೀಲದಿಂದ ನೀರು ಕುಡಿಯಬಹುದು. ಇದರಿಂದ ನಿಮಗೆ ಯಾವ ಕೇಡೂ ಸಂಭವಿಸದು.' 'ನಿಮ್ಮ ಚೀಲ' ಎಂಬುದಾಗಿ ಆ ನೀರು ಹೊರುವ ವ್ಯಕ್ತಿ ಹೇಳಿದುದರ ಅರ್ಥ ದೇಹ, ಹೊಟ್ಟೆ ಇತ್ಯಾದಿ.

ನಿಜವಾದ ಶ್ರದ್ಧೆಯಿಂದಲೇ ಆತನ ಸಾಕ್ಷಾತ್ಕಾರವನ್ನು ಪಡೆದುಕೊಂಡುಬಿಡಬಹುದು. ಭಗವಂತನ ಸಂಬಂಧವಾಗಿ ಹೇಳಿರುವುದರಲ್ಲೆಲ್ಲಾ ಪೂರ್ಣ ಶ್ರದ್ಧೆಯಿಡುವುದಾದರೆ, ಸಾಕ್ಷಾತ್ಕಾರ ಇನ್ನೂ ಬೇಗ ದೊರೆತುಬಿಡುತ್ತದೆ. ಹಸು ಆರಿಸಿಕೊಂಡು ಮೇವು ಮೇಯ್ದರೆ ಕಡಿಮೆ ಹಾಲು ಕೊಡುತ್ತದೆ. ಆದರೆ ಅದು ಎಲ್ಲಾ ವಿಧದ ಗಿಡಗಡ್ಡೆಗಳನ್ನು ತಿಂದಿತು ಎಂದರೆ, ಧಾರಾಕಾರವಾಗಿ ಹಾಲು ಕರೆಯುತ್ತದೆ.

ಮೊದಲು ನಿರ್ಜನಪ್ರದೇಶದಲ್ಲಿ ಗೋಪ್ಯವಾಗಿ ಸಾಧನೆ ಭಜನೆ ಮಾಡಿ ಭಗವಂತನ ಸಾಕ್ಷಾತ್ಕಾರ ಪಡೆದು ಈ ಜಗತ್ತಿನಲ್ಲಿದ್ದರೆ, ಜನಕರಾಜನಂತೆ ವಾಸಿಸಬಹುದು. ಇಲ್ಲದಿದ್ದರೆ ಏನನ್ನು ತಾನೆ ಸಾಧಿಸಲಾದೀತು?

ಭಗವಂತನ ಕೃಪೆಯೊಂದು ದೊರೆಯಿತು ಎಂದರೆ, ಒಂದು ಮುಹೂರ್ತದೊಳಗೇ ಈ ಅಷ್ಟಪಾಶಗಳೂ ನಮ್ಮನ್ನು ಬಿಟ್ಟು ತೊಲಗಬಹುದು. ಇದು ಹೇಗೆ ಗೊತ್ತೆ? ಒಂದು ಪಕ್ಷ ಸಾವಿರಾರು ವರ್ಷಗಳಿಂದ ಒಂದು ಕೊಠಡಿ ಕತ್ತಲೆಯಾಗಿಯೇ ಇತ್ತು ಅಂತ ಇಟ್ಟುಕೊ. ಅಲ್ಲಿಗೆ ಬೆಳಕು ತಂದೊಡನೆಯೇ ಕತ್ತಲೆ ಪರಾರಿಯಾಗಿ ಬಿಡುತ್ತದೆ; ಕಿಂಚಿತ್ ಕಿಂಚಿತ್ತಾಗೇನೂ ಅಲ್ಲ. ಐಂದ್ರಜಾಲಿಕನ ಆಟವನ್ನು ನೀನು ನೋಡಿಲ್ಲವೆ? ಬಹಳ ಗಂಟು ಹಾಕಿರುವ ಒಂದು ಹಗ್ಗದ ತುದಿಯನ್ನು ಒಂದು ಆಸರೆಗೆ ಕಟ್ಟಿ, ಅದರ ಇನ್ನೊಂದು ತುದಿಯನ್ನು ತನ್ನ ಕೈಯಲ್ಲಿ ಹಿಡಿದುಕೊಳ್ಳುತ್ತಾನೆ. ಬಳಿಕ ಒಂದೆರಡು ಸಲ ಹಗ್ಗವನ್ನು ಅಲುಗಾಡಿಸುತ್ತಾನೆ. ಒಡನೇ ಗಂಟುಗಳೆಲ್ಲಾ ಬಿಚ್ಚಿಕೊಂಡುಬಿಡುತ್ತವೆ. ಆದರೆ ಬೇರೆ ಯಾರೇ ಆಗಲಿ, ಎಷ್ಟೇ ಪ್ರಯತ್ನಪಟ್ಟರೂ ಅದನ್ನು ಬಿಚ್ಚಲಾಗುವುದಿಲ್ಲ. ಗುರುವಿನ ಕೃಪಾಬಲದಿಂದ ಅಜ್ಞಾನದ ಎಲ್ಲಾ ಗಂಟುಗಳು ಒಂದು ಮುಹೂರ್ತದಲ್ಲೇ ಬಿಚ್ಚಿಹೋಗಿಬಿಡುತ್ತವೆ.

ಮುಖ್ಯವಾಗಿ ಮಾಡಬೇಕಾದ್ದು ಭಗವಂತನನ್ನು ಪ್ರೀತಿಸುವುದು, ಆತನ ಮಾಧುರ್ಯವನ್ನು ಸವಿಯುವುದು. ಆತ ರಸ, ಭಕ್ತ ಆಸ್ವಾದಕ. ಭಕ್ತ ಭಗವದಾನಂದವನ್ನು ಸವಿಯುತ್ತಾನೆ. ಆತ ತಾವರೆ ಹೂವು. ಭಕ್ತ ದುಂಬಿ. ಭಕ್ತ ತಾವರೆಹೂವಿನ ಮಧುವನ್ನು ಹೀರುತ್ತಾನೆ.

ಆಧ್ಯಾತ್ಮಿಕ ಜೀವನದ ಮೊದಮೊದಲಲ್ಲಿ ತೀರ್ಥಯಾತ್ರೆ, ಕೊರಳಿಗೆ ರುದ್ರಾಕ್ಷಿ ಅಥವಾ ತುಳಸಿಮಾಲೆ, ಮಡಿ-ಇವನ್ನೆಲ್ಲಾ ಆಚರಿಸಬೇಕು. ವಸ್ತುಲಾಭವಾಯಿತೆಂದರೆ, ಭಗವದ್ದರ್ಶನ ದೊರೆಯಿತು ಎಂದರೆ ಬಾಹ್ಯಾಡಂಬರ ಕ್ರಮೇಣ ಕಡಮೆಯಾಗಿಬಿಡುತ್ತದೆ. ಬಳಿಕ ಉಳಿದುಕೊಳ್ಳುವ ಕೆಲಸ ಆತನ ನಾಮಜಪ ಮಾಡುವುದು ಮತ್ತು ಸ್ಮರಣ ಮನನ.

ನಿಜವಾಗಿ ಇರುವುದು ಒಂದೇ ಹೊರತು ಎರಡಲ್ಲ. ಮನುಷ್ಯ ಭಗವಂತನನ್ನು ಯಾವ ಹೆಸರಿನಿಂದ ಬೇಕಾದರೂ ಕರೆಯಲಿ, ಹೃತ್ಪೂರ್ವಕವಾಗಿ ಭಗವಂತನನ್ನು ಕರೆದುದೇ ಆದರೆ ಆತ ಭಗವಂತನ ಸಾಕ್ಷಾತ್ಕಾರವನ್ನು ಪಡೆದೇ ಪಡೆಯುತ್ತಾನೆ. ವ್ಯಾಕುಲತೆ ಇತ್ತು ಎಂದರೆ ಜಯ.

ಆ ಒಂದರಿಂದಲೇ ಅನೇಕ ಉಂಟಾಗಿದೆ. ನಿತ್ಯದಿಂದಲೇ ಲೀಲೆಯ ಉದ್ಭವ. ಒಂದು ಅವಸ್ಥೆ ಇದೆ. ಅದರಲ್ಲಿ ಅನೇಕವೂ ಹೊರಟುಹೋಗುತ್ತದೆ. ಹಾಗೆಯೇ ಇದೂ ಕೂಡ. ಏಕೆಂದರೆ ಒಂದು ಎಂಬುದು ಇತ್ತು ಎಂದರೆ, ಎರಡು ಎಂಬುದು ಇರಲೇಬೇಕು. ಬ್ರಹ್ಮ ಅನುಪಮ-ಉಪಮೆಯ ಮೂಲಕ ಆತನನ್ನು ಅರಿಯುವಂತಿಲ್ಲ. ಆತ ಬೆಳಕಿಗೂ ಅಂಧಕಾರಕ್ಕೂ ಮಧ್ಯೆ. ಆತ ಬೆಳಕೇನೋ ನಿಜ, ಆದರೆ ನಮ್ಮ ಈ ಬೆಳಕಲ್ಲ-ಈ ಜಡಬೆಳಕಲ್ಲ.

ಎಲ್ಲಿಯವರೆಗೆ 'ಭಗವಂತ ಕರ್ತ' ಎಂಬ ಜ್ಞಾನೋದಯವಾಗುವುದಿಲ್ಲವೊ, ಅಲ್ಲಿಯವರೆಗೆ ಮತ್ತೆ ಮತ್ತೆ ಈ ಜಗತ್ತಿಗೆ ಬರಲೇಬೇಕಾಗುತ್ತದೆ. ಮತ್ತೆ ಮತ್ತೆ ಜನ್ಮವೆತ್ತಬೇಕಾಗುತ್ತದೆ. 'ಭಗವಂತ ಕರ್ತ' ಎಂಬ ಜ್ಞಾನೋದಯವಾಗಿ ಬಿಟ್ಟರೆ ಮತ್ತೆ ಜನ್ಮವೆತ್ತಬೇಕಾಗಿರುವುದಿಲ್ಲ. ಎಲ್ಲಿಯವರೆಗೆ, 'ಹೇ ಭಗವಂತ, ನಿಜವಾಗಿ ಇರತಕ್ಕವನು ನೀನೊಬ್ಬನೇ' ಎಂದು ಹೇಳುವುದಿಲ್ಲವೊ, ಅಲ್ಲಿಯವರೆಗೆ ಈ ಸಂಸಾರದಿಂದ ಬಿಡುಗಡೆಯಾಗುವುದಿಲ್ಲ. ಪುನರ್ಜನ್ಮ, ಈ ಜಗತ್ತಿಗೆ ಬಂದು ಹೋಗುವುದು, ಇದ್ದೇ ಇರುತ್ತದೆ.

ಶ್ರೀರಾಮಕೃಷ್ಣ ವಚನವೇದದಿಂದ